CC-O. In Public Domain. Digitized by eGangotri



ಶಾಲೆಯ ಕಥೆಗಳು-1

ಆ ಒಂದು ರೂಪಾಯಿ!

ಕೆ. ರಾಮಕೃಷ್ಣ ಉಡುಪ

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶಾಲೆಯ ಕಥೆಗಳು - 1

ಆ ಒಂದು ರೂಪಾಯಿ!

ಕೆ. ರಾಮಕೃಷ್ಣ ಉಡುಪ, ಎಂ.ಎ., ಬಿ.ಟಿ.

ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು
Sri Vidyabharathi Book Centre, Sringeri

CC-O. In Public Domain. Digitized by eGangotri

AA ONDU ROOPAYI ! ('SHALEYA KATHEGALU' SERIES, No. 1) by Professor K. RAMAKRISHNA UDUPA, M.A., B.T., Principal and Professor of Kannada (RETD.), Department of Collegiate Education (Karnataka), No. M-5, 'Srikara', Kuvempu Nagar, Mysore 570 023. Published by GEETHA BOOK HOUSE, K.R. Circle, Mysore 570 001. First Published 1986.

ಪ್ರಥಮ ಮುದ್ರಣ 1986

ಕಾಪಿರೈಟ್ © ಕೆ. ರಾಮಕೃಷ್ಣ ಉಡುಪ

ಕೆಲವು ಸುಪ್ರಸಿದ್ಧ ಹಿಂದೀ ಕಥೆಗಳನ್ನು ಓದಿ, ಅವನ್ನು ಸ್ಥೂಲವಾಗಿ ಆಧಾರವಾಗಿಟ್ಟು ಕೊಂಡು ಈ ಕಥೆಗಳನ್ನು ಬರೆದಿದ್ದೇನೆ. ಶಾಲಾ ಜೀವನಕ್ಕೆ ಸಂಬಂಧಿಸಿದ ಈ ಸರಸ ಕಥೆಗಳು ಶಾಲಾ ಮಕ್ಕಳಿಗೆ ಪ್ರಿಯವೂ, ಹಿತವೂ ಆದೀತೆಂದು ಭಾವಿಸುತ್ತೇನೆ.

—ಲೇಖಕ

ಮುದ್ರಕರು : ಶ್ರೀ ವಿದ್ಯಾಭಾರತಿ Book Centre, Sringeri
ಕರ್ನಾಟಕ ಪ್ರೆಸ್, ಚಾಮರಾಜಪುರಂ, ಮೈಸೂರು 570 004

CC-O. In Public Domain. Digitized by eGangotri

ಆ ಒಂದು ರೂಪಾಯಿ!

ನಾನು ಮತ್ತು ನನ್ನ ಚಿಕ್ಕಪ್ಪನ ಮಗ ಶ್ಯಾಮಣ್ಣ ನಮ್ಮಲ್ಲಿಂದ ಒಂದು ಮೈಲಿ ದೂರದ ಮೂಡುಬೆಟ್ಟ ಶಾಲೆಗೆ ಹೋಗುತ್ತಿದ್ದೆವು. ನನ್ನ ಪ್ರಾಯ ಆಗ ಎಂಟು ವರ್ಷ. ಶ್ಯಾಮಣ್ಣನದು ಎರಡು ವರ್ಷ ಹೆಚ್ಚು. ಬೆಳಗ್ಗೆದ್ದ ಕೂಡಲೇ ಸರಿಯಾಗಿ ಗಂಜಿ ಊಟ ಮಾಡಿ, ಮಧ್ಯಾಹ್ನಕ್ಕೆ ಅವಲಕ್ಕಿ ಮೊಸರಿನ ಬುತ್ತಿ ಕಟ್ಟಿಕೊಂಡು ಹೊರಟುಬಿಟ್ಟರೆ, ಅನಂತರ ಇಡೀ ದಿನ ನಮ್ಮನ್ನು ಕೇಳುವವರೇ ಇದ್ದಿಲ್ಲ. ಮುಳ್ಳುಕತಾಗಿದ ನೆಪದಿಂದ ಕಾಲು ಕುಂಟಾಗಿಸಿ ನಡೆದು, ಕಾಡಿ ಬೇಡಿ, ಹೇಗಾದರೂ ಹೊಸ ಮೆಟ್ಟಿನ 'ಸೇಂಕ್ಷನ್' ಸಹ ಪಡೆದಿದ್ದೆವು. ಮೊತ್ತಮೊದಲು ಆ ಮೆಟ್ಟಿನ ಜೋಡೇ ಕಾಲಿಗೆ ಕಚ್ಚಿ ಪಾದವಿಡೀ ಬಾತುಹೋಗಿತ್ತು. ಆದರೂ ಗರ್ವದಿಂದ ಅದನ್ನು ಮರ್ದನ ಮಾಡಿ 'ಚರ್-ಮುರ್' ಮಾಡುತ್ತ ನಡೆಯುತ್ತಿದ್ದೆವು. ಆಹಾ! ಆಗಿನ ಆನಂದ ಈಗಿನ ನೂರು ರೂಪಾಯಿ ಬೆಲೆಯ 'ಬೂಟ್ಸ್'ಗಳಿಂದಲೂ ಒದಗಿಬರುವುದಿಲ್ಲ. ದಾರಿಯಲ್ಲಿ ನೇರಳೆಹಣ್ಣು, ಗೇರುಹಣ್ಣುಗಳನ್ನು ಕಲ್ಲು ಹೊಡೆದು ಬೀಳಿಸಿ ತಿಂದಾಗ ಆಗುತ್ತಿದ್ದ ಆನಂದ ಈಗ ದೇವೇಂದ್ರಭವನದ ಬಾದಾಮಿ ಹಲ್ವದಿಂದಲೂ ಸಿಗಲಾರದು. ಒಮ್ಮೊಮ್ಮೆ ದಾರಿಯ ತೋಟದ ಮಾಲಿಕ ಓಡಿಸಿಕೊಂಡು ಬಂದಾಗ ನಾವು ಆಗ ಓಡಿದ್ದ ಆ ಓಟ-ಆ ರಭಸ, ಈಗ ಎಲ್ಲಿಯಾದರೂ ಇದ್ದಿದ್ದರೆ, ಅಖಿಲ ಭಾರತ 'ಜಾಂಪಿಯನ್'

Sri Vidyabharathi Book Centre, Sringeri

CC-O. In Public Domain. Digitized by eGangotri

ಪಿಪ್' ಖಂಡಿತ ಬರುತ್ತಿತ್ತು.

ನಮ್ಮ ಶಾಲೆಯ ಪಾಸ್ಕಲ್ ಮಾಸ್ಟರರ ಹತ್ತಿರ ಸರಿಯಾದ ಹಾಜರಿಪಟ್ಟಿಯೇ ಇದ್ದಿಲ್ಲ. ಹಾಗಾಗಿ ನಾವು ಹೋದಾಗ ಶಾಲೆ ; ಇಲ್ಲವಾದಾಗ ರಜೆ. ಆದರೆ ಇನ್ಸ್‌ಪೆಕ್ಟ್. ರರು ಬರಲಿಕ್ಕೆ ಮೂರು ದಿನವಿರುವಾಗ ಮಾತ್ರ ನಮಗೆಲ್ಲ ಹೆಸರು ಕರೆಯಲಿಕ್ಕೆ, ಕರೆದಾಗ 'ಹಾಜರ್' ಎನ್ನಲಿಕ್ಕೆ ಕಲಿಸಿ ಕೊಡುತ್ತಿದ್ದರು. ಶ್ಯಾಮಣ್ಣನೊಮ್ಮೆ ಇನ್ಸ್‌ಪೆಕ್ಟರರ ಇದಿರಲ್ಲೇ 'ದಿನಾಲೂ ಹೀಗೆ ಕರೆಯಬೇಕು ಸಾರ್' ಎಂದು ಹೇಳಿ ಪಾಸ್ಕಲ್ ಮಾಸ್ಟರರಿಂದ ಕಣ್ಣು ಕೆಂಪಗೆ ಮಾಡಿಸಿ ಕೊಂಡಿದ್ದ. ಮರುದಿನ ಛಡಿಯೂ ಬಿದ್ದಿತ್ತು. ಇನ್ಸ್‌ಪೆಕ್ಟರು ಒಮ್ಮೆ ಊರಿಗೆ ಬಂದು ಹೋಗಿಬಿಟ್ಟರೆ ಮತ್ತೆ ನಮಗೆ ನಾವೇ ಯಜಮಾನರು. ಹಾಗಾಗಿ ಎಷ್ಟೋ ವೇಳೆ ಮಂಗ ಆಡಿಸುವವನ ಹಿಂದೆಯೇ ದಿನವಿಡೀ ಇದ್ದು ಬಿಡುತ್ತಿದ್ದೆವು. ಕೃಷ್ಣಾಷ್ಟಮಿ, ಮೊಹರಂ ಸಮಯದಲ್ಲಂತೂ ಹುಲಿವೇಷಕ್ಕೆ ಬಣ್ಣ ಬಳಿದಂದಿನಿಂದ ಬಣ್ಣ ಬಿಚ್ಚುವವರೆಗೂ ಹುಲಿಯ ಮರಿಗಳಂತೆ ಹೆಚ್ಚುಕಡಿಮೆ ನಾವು ಹಿಂಬಾಲಿಸುತ್ತಲೇ ಇದ್ದೆವು.

ದಾರಿಯಲ್ಲಿ ನಾವು ಒಂದು ರಾಜರಸ್ತೆಯನ್ನು ದಾಟ ಹೋಗಬೇಕಿತ್ತು. ಅದರಲ್ಲಿ ಆಗೊಬ್ಬ ಹೊಸದಾಗಿ 'ಲಕ್ಷ್ಮೀ ಮೋಟರ್ ಸರ್ವಿಸ್' ಶುರುಮಾಡಿದ್ದ. ದಾರಿಯಲ್ಲಿ ಒಂಬತ್ತು ಗಂಟೆಗೆ ಆ ಮೋಟರ್ ಹೋಗುವುದನ್ನು ನೋಡಿ ಅದರ ಧೂಳು ಮೈಮೇಲಾಗುವವರೆಗೆ ಅಲ್ಲೇ ನಿಂತು ಆನಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಡುತ್ತಿದ್ದೆವು. ಮಾರ್ಗದ ಬದಿಯಲ್ಲಿ ಕಾದು ನಿಂತು, ಕೊನೆಗೆ ದೂರದಿಂದ ಆ ಬಸ್ಸು 'ಡುರ್ರನೆ' ಬರುವುದನ್ನು ಕಂಡಾಗ, ನಮಗೆ ಕುಬೇರನ ಪುಷ್ಪಕವಿಮಾನವನ್ನು ನೋಡಿ ದಷ್ಟು ಆನಂದವಾಗುತ್ತಿತ್ತು. ಅದು ಹಾದುಹೋಗುವಾಗ ಆ ಧೂಳು ಮೈಮುಖದ ಮೇಲೆ ಬಿದ್ದರೆ ಆಗುತ್ತಿದ್ದ ಆ ಸಂತೋಷ—ಈಗಿನ 'ಕುಟಿಕ್ಯೂರಾ' ಪೌಡರಿನಿಂದಲೂ ಒದಗಿಬಾರದು. ಕೆಲವು ವೇಳೆ ಒಂದೆರಡು ಫರ್ಲಾಂಗ್ ಅದರ ಹಿಂದೆಯೇ ಓಡುವುದೂ ಇತ್ತು. ಆ ಬಸ್ಸು ಎಲ್ಲಿಯಾದರೂ ದಾರಿಯಲ್ಲಿ ಹಾಳಾಗಿ ನಿಂತುಬಿಟ್ಟರೆ, ನಾವೆಲ್ಲ ಸೇರಿ ದೂಡುವಾಗ ಆಗಿನ ನಮ್ಮ ಶಕ್ತಿ ಈಗಿನ ನಮ್ಮ ಯೌವನ ಕಾಲದಲ್ಲಿಯೂ ತೋರಿಬಾರದು. ಹಾಗೆ ಬಲವಾಗಿ ದೂಡಿ ದೂಡಿ, ಅದು ನಮ್ಮ ಮುಖಕ್ಕೆ ಹೊಗೆ ಕಾರುತ್ತಾ 'ಗುಡು ಗುಡು' ಹೇಳಲಾರಂಭಿಸಿದರೆ ನಾವೆಲ್ಲ ಹಾರಿ ಹಾರಿ ಕುಣಿಯುತ್ತಿದ್ದೆವು. ಆಗ ಡ್ರೈವರನೂ ನಮ್ಮ ಶಕ್ತಿಗೆ ಮೆಚ್ಚಿ, ನಮ್ಮನ್ನು ಬಸ್ಸು ಹತ್ತಿಸಿ, ಸ್ವಲ್ಪ ದೂರ ಕೊಂಡುಹೋಗಿ ಇಳಿಸಿಬಿಡುತ್ತಿದ್ದನು. ಪುನಃ ಒಂದು ಮೈಲು ಹಿಂದಕ್ಕೆ ನಡೆದು ಬಂದು ಶಾಲೆಗೆ ಹೋಗುವಾಗ ತಡವಾದರೂ ನಮಗೆ ದಿಗ್ವಿಜಯ ಮಾಡಿ ಬಂದ ಸಂತೋಷವಾಗುತ್ತಿತ್ತು. ಪಾಸ್ಕಲ್ ಮಾಸ್ಟರು, ತಡವೇಕೆಂದು ಕಣ್ಣು ಕೆಂಪು ಮಾಡಿದರೆ ಏನಾದರೊಂದು ನೆಪ ನಮ್ಮಲ್ಲಿ ತಪ್ಪನೆ ತಯಾರಿರುತ್ತಿತ್ತು. ಅದೂ ಅಲ್ಲದೆ ಮಾಸ್ಟರರಿಗೆ ಮನೆ ಕಟ್ಟಲಿಕ್ಕೆ ನಮ್ಮಪ್ಪನು ಎರಡು ಹಾಲಿನ ಮರ ದುರ್ಮಾರ್ಥವಾಗಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಟ್ಟಿದ್ದುದರಿಂದ ಅವರೂ ನಮ್ಮ ಮಟ್ಟಿಗೆ ಸ್ವಲ್ಪ ತಣ್ಣಗೇ ಇರುತ್ತಿದ್ದರು.

ದಾರಿಯಲ್ಲಿ ನಗರದ ಮಹಾಪುರುಷನೊಬ್ಬನು ಒಂದು ಅಡಿಕೆ ತೋಟದ ಕೆಲಸವಾರಂಭಿಸಿದ್ದನು. ಆದಕ್ಕಾಗಿ ಒಂದು ಬಾವಿಯನ್ನು ತೋಡಿಸುತ್ತಿದ್ದನು. ಆ ಬಾವಿಯ ಆಳ ನೋಡುವುದು, ತೋಟದ ಕೆಲಸಕ್ಕೆ ಸೇರುವುದು—ಇವೆಲ್ಲ ನಮಗೊಂದು ಹೃದಯಂಗಮ ವಿಚಾರವಾಗಿತ್ತು. ಆ ತೋಟದ ಮುದಿ ಮಾಲಿಯೂ ತನ್ನ ಜೋಂಪಡಿಯೊಳಗೆ ನಮ್ಮನ್ನು ಬಹಳ ಪ್ರೇಮದಿಂದ ಕರೆದೊಯ್ಯುತ್ತಿದ್ದನು. ನಾವು ಅವನೊಡನೆ ಜಗಳವಾಡಿ ಬಾವಿಯ ಮಣ್ಣು ಎಳೆಯುತ್ತಿದ್ದೆವು. ಕೆಲವೇಳೆ ಬಾಲ್ದಿ ತೆಗೆದುಕೊಂಡು ಸಸಿಗಳಿಗೆ ನೀರೆರೆಯುತ್ತಿದ್ದೆವು. ಗುದ್ದಲಿ ತೆಗೆದುಕೊಂಡು ಹೊಂಡ ತೋಡುತ್ತಿದ್ದೆವು. ಹೊಂಡ ತೋಡುವಾಗ ಶ್ಯಾಮಣ್ಣನ ಕಾಲಿಗೆ ಗುದ್ದಲಿ ತಾಗಿ ಒಮ್ಮೆ ರಾಮಾರಕ್ತವಾಗಿತ್ತು. ಆಗ ಮಾಲಿಯು ಏನೋ ಸೊಪ್ಪಿನ ರಸ ಹಾಕಿ ಕಟ್ಟಿಬಿಟ್ಟಿದ್ದನು. ದಾರಿಯಲ್ಲಿ ಕಲ್ಲು ತಾಗಿತೆಂದು ಸುಳ್ಳು ಹೇಳಲಿಕ್ಕೆ ತಯಾರಾಗಿಯೇ ಮನೆ ಸೇರಿದ್ದೆವು. ಆ ಮಾಲಿ ದಿನವಿಡೀ ಮಾಡುವ ಕೆಲಸವನ್ನು ನಾವು ಕೆಲವೇ ಗಂಟೆಗಳಲ್ಲಿ ಮಾಡಿ ಮುಗಿಸುತ್ತಿದ್ದೆವು. ಈಗ ಆ ಮಾಲಿ ಇಲ್ಲ. ಆದರೆ ಆ ಅಡಿಕೆ ತೋಟ ಎಷ್ಟು ಜೆನ್ನಾಗಿ ಕಂಗೊಳಿಸುತ್ತಿದೆ! ಆದರ ಸಮೀಪ ಹಾದು ಹೋಗುವಾಗ ಆ ಮರಗಳನ್ನು ಅಪ್ಪಿಕೊಂಡು ಅಳಬೇಕು ಎಂದು ತೋರುತ್ತಿದೆ. ಅವುಗಳೊಡನೆ ನಿಮ್ಮನ್ನು ಬೆಳಸಲಿಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಾಲ್ಯದಲ್ಲಿ ನಾವು ತುಂಬಾ ಕಷ್ಟಪಟ್ಟಿದ್ದೆವು ; ನೀವೀಗ ಮರೆತರೂ ನಾವು ಮರೆತಿಲ್ಲ–ಎಂದು ಹೇಳಿಬಿಡಲೋ ಅನಿಸುತ್ತದೆ.

ಒಮ್ಮೊಮ್ಮೆ ಮೂರುನಾಲ್ಕು ದಿನಗಳವರೆಗೂ ನಾವು ಶಾಲೆಯಿಂದ ತಪ್ಪಿಸಿಕೊಳ್ಳುವುದಿತ್ತು. ಆಗ ಮಾತ್ರ ಪಾಸ್ಕಲ್ ಮಾಸ್ಟರರ ಕೆರಳಿದ ಕಣ್ಣು ತಣ್ಣಗಾಗುವಂತೆ ಏನಾದರೊಂದು ವೇಷ ಹಾಕಬೇಕಾಗುತ್ತಿತ್ತು. ಆದರೆ ಅಂತಹ ಕಲ್ಪನಾಶಕ್ತಿ ಈಗ ಉಳಿಯುತ್ತಿದ್ದರೆ ಎಷ್ಟೆಷ್ಟೋ ದೊಡ್ಡ ಕತೆಕಾದಂಬರಿಗಳನ್ನು ಬರೆದು ಹಾರಿಸಬಹುದಾಗಿತ್ತು. ಆಗ ಎರಡನೇ ಕ್ಲಾಸಿನ ನಮಗಿಬ್ಬರಿಗೂ ನಾಲ್ಕುನಾಲ್ಕಾಣೆಯಂತೆ ಶಾಲಾ ಫೀಸು ಕೊಡಲಿಕ್ಕಿತ್ತು. ಕ್ಲಾಸಿನ ಹದಿಮೂರು ಮಂದಿಯಲ್ಲಿ ಮೂರುನಾಲ್ಕು ಮಂದಿಯೂ ಸರಿಯಾಗಿ ಫೀಸು ಕೊಡುತ್ತಿದ್ದಿಲ್ಲ. ಫೀಸಿಗಾಗಿ ಗದರಿಸಿದರೆ ಶಾಲೆಗೇ ಚಕ್ಕರ್ ಹೊಡೆಯುವ ಮಕ್ಕಳು ಹೆಚ್ಚಿನವರಾಗಿದ್ದರು. ಇನ್ಸ್‌ಪೆಕ್ಟರು ಬರುವಾಗ ಒಟ್ಟಾಗಿ ಮೂವತ್ತು ಮಕ್ಕಳೂ ಇರದಿದ್ದರೆ ಮಾಸ್ಟರರಿಗೂ 'ಟೋಪಿ'ಯಾಗಬಹುದಾದ್ದರಿಂದ ಅವರೂ ಬಹಳವಾಗಿ ಗದರಿಸುತ್ತಿರಲಿಲ್ಲ. ಆದರೆ ನಾನು ಮತ್ತು ಶ್ಯಾಮಣ್ಣ ಸರಿಯಾಗಿ ಫೀಸು ಕೊಡುವ ಸಂಭಾವಿತ ವರ್ಗಕ್ಕೆ ಸೇರಿದವರು. ಹಾಗಾಗಿ ನಾಲ್ಕಾರು ದಿನ ಗೈರು ಹಾಜರಾದರೂ, ಹೋಗುವಾಗ ಫೀಸಿನ ಎಂಟಾಣೆ ಕೈಯಲ್ಲಿದ್ದರೆ ಮಾಸ್ಟರರ ಯಾವ ಹೆದರಿಕೆಯೂ ನಮಗಿದ್ದಿಲ್ಲ.

ಅದಲ್ಲದೆ, ನಮ್ಮ ಪಾಸ್ಕಲ್ ಮಾಸ್ಟರರು ಹೊಲಿಗೆ ಕೆಲಸ ಥಳ್ಳಿ ನುರಿತವರೂ ಆಗಿದ್ದರು. ಅವರ ಅಂಗಡಿಯಲ್ಲಿ ಹೊಲಿ

Sri Vidyabharathi Book Centre, Sirsi

CC-O. In Public Domain. Digitized by eGangotri

ಯುವ ಚರಖ ಸಹ ಒಂದಿತ್ತು. ನಮ್ಮ ಮನೆಯ ಸುತ್ತ ಮುತ್ತಲಿನವರಿಗೆ ಮಾಸ್ಟರರ ಹತ್ತಿರವೇ ಹೊಲಿಗೆ ಕೆಲಸ ಮಾಡಿಸಬೇಕೆಂದು ಹೇಳುತ್ತಿದ್ದೆವು. ಹಾಗಾಗಿ ಕೆಲ ಗಿರಾಕಿಗಳನ್ನು ನಾವು ತಗುಲಿಸುತ್ತಿದ್ದೆವು. ಆಥವಾ, ಒಂದೇ ಮಾತಿನಲ್ಲಿ ಹೇಳುವುದಾದರೆ, ನಾವು ಪಾಸ್ಕಲ್ ಮಾಸ್ಟರರ ಹೊಲಿದ ಬಟ್ಟೆಗಳಿಗೆ ಟೂರಿಂಗ್ ಏಜಂಟರಾಗಿದ್ದೆವು. ನಮ್ಮ ಪ್ರಯತ್ನದಿಂದ ಮಾಸ್ಟರರಿಗೆ ಏನಾದರೂ ನಾಲ್ಕು ಕಾಸು ಲಾಭವಾದರೆ ನಮಗಾಗುವ ಆನಂದಕ್ಕೆ ಮಿತಿಯೇ ಇದ್ದಿಲ್ಲ.

ಕೆಲವೇಳೆ ನಾವು ಮಾಸ್ಟರರಿಗೆ ಏನಾದರೂ ಉಡುಗೊರೆಗಳನ್ನು ತಂದೊಪ್ಪಿಸುವುದೂ ಇತ್ತು. ಬದನೆಕಾಯಿ, ಬಾಳೆಕಾಯಿ, ಎಳೆಮೆಣಸು—ಹೀಗೆ ನಮ್ಮ ಹಿತ್ತಲಲ್ಲಿ ಏನೇ ಆದರೂ ಮೊತ್ತಮೊದಲು ನಾವು ನಮ್ಮ ಚೀಲದಲ್ಲಿ ತುಂಬಿಸುತ್ತಿದ್ದೆವು. ಪುಸ್ತಕ ಮರೆತುಹೋದರೂ ಮಾಸ್ಟರರ ಬದನೆಕಾಯಿ ನಮಗೆ ಮರೆತುಹೋಗುತ್ತಿದ್ದಿಲ್ಲ. ಒಮ್ಮೆ ನಾನು ಕೇಳದೆ ಚೀಲದಲ್ಲಿ ಹಾಗಲಕಾಯಿ ತುಂಬಿಸಿದ್ದಕ್ಕೆ ನಮ್ಮಜ್ಜಿ ಸರಿಯಾಗಿ ಛಡಿಯನ್ನು ಬಿಗಿದಿದ್ದರು. ಆಗ ನಮ್ಮಮ್ಮ ಮಧ್ಯೆ ಬಂದು ನನ್ನ ಅಪಾರ ಗುರುಭಕ್ತಿಯ ವಿಚಾರ ಕೊಂಡಾಡದಿರುತ್ತಿದ್ದರೆ, ಅಪ್ಪ ಸಹ ಬಂದು ನನಗೆ ಎರಡು ಬಾರಿಸುತ್ತಿದ್ದರೋ ಏನೋ! ಅಂತೂ ಮಾಸ್ಟರರ ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದಕ್ಕೆ ನಾವು ಹೊಸ ಹೊಸ ಉಪಾಯಗಳನ್ನು ಸಂಶೋಧಿಸುತ್ತಲೇ ಇದ್ದೆವು.

ನಮ್ಮ ಮಾಸ್ಟರರಿಗೆ ಹಕ್ಕಿಗಳ ಹುಚ್ಚು ವಿಶೇಷವಾಗಿತ್ತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪಾಠಶಾಲೆಯ ನಾಲ್ಕೂ ಮೂಲೆಗಳಲ್ಲಿ ಗಿಳಿ, ಪಾರಿವಾಳ, ಕೋಗಿಲೆ ಮುಂತಾದ ಹಕ್ಕಿಗಳ ಗೂಡುಗಳು ತೂಗಾಡುತ್ತಿದ್ದುವು. ನಮಗೆ ಪಾಠ ಬರಲಿ, ಬಾರದಿರಲಿ–ಅಲ್ಲಿರುವ ಹಕ್ಕಿಗಳಿಗಂತೂ ಸರಿಯಾಗಿ ಎಲ್ಲ ಪಾಠಗಳೂ ಬಾಯಿಪಾಠವಾಗಿರುತ್ತಿತ್ತು. ನಮ್ಮೊಡನೆಯೇ ಅವುಗಳು ಕೂಡಾ ಓದುತ್ತಿದ್ದವು. ಆ ಹಕ್ಕಿಗಳಿಗೆ ಬತ್ತ, ನೇರಳೆಹಣ್ಣು, ಬಾಳೆಹಣ್ಣು, ಇವನ್ನೆಲ್ಲ ತಂದುಕೊಡುವುದರಲ್ಲಿ ನಾವು ಬಹಳ ಉತ್ಸಾಹ ತೋರುತ್ತಿದ್ದೆವು. ಆ ಹಕ್ಕಿಗಳಿಗೆ ಪತಂಗಗಳೆಂದರೆ ಪ್ರೀತಿ. ಹಾಗಾಗಿ ನಮ್ಮ ಪರಾಕ್ರಮ ಚಾತುರ್ಯಗಳನ್ನೆಲ್ಲ ತೋಟದ ಪತಂಗಗಳ ಮೇಲೆ ಪ್ರಯೋಗಿಸುತ್ತಲೂ ಇದ್ದೆವು. ಅವನ್ನು ಬಲಿಗೊಟ್ಟು ಮಾಸ್ಟರರ ರೌದ್ರರೂಪವನ್ನು ಕೆಲವೇಳೆ ತಣಿಸಿದುದೂ ಉಂಟು.

* * *

ಒಂದು ದಿನ ಬೆಳಗ್ಗೆ ನಾವು ಅಣ್ಣತಮ್ಮಂದಿರಿಬ್ಬರೂ ಕೆರೆಗೆ ಮುಖ ತೊಳೆಯಹೋಗಿದ್ದೆವು. ಆಗ ಶ್ಯಾಮಣ್ಣನು ಏನೋ ಒಂದು ಬಿಳಿ ವಸ್ತುವನ್ನು ತನ್ನ ಮುಷ್ಟಿಯೊಳಗಿಟ್ಟುಕೊಂಡು ತೋರಿಸಿದ. ನಾನು ಹಾರಿಬಿಟ್ಟು ಮುಷ್ಟಿ ಬಿಡಿಸಿ ನೋಡಿದಾಗ ಅದರಲ್ಲೊಂದು ರೂಪಾಯಿ ಇತ್ತು. 'ಇದೆಲ್ಲಿಂದ ನಿನಗೆ ಸಿಕ್ಕಿತು?' ಎಂದು ಕಣ್ಣು ಅರಳಿಸಿ ಆಶ್ಚರ್ಯದಿಂದ ಕೇಳಿದೆ. 'ಅಮ್ಮ ಗೋಡೆಯ ಹಲಗೆಯಲ್ಲಿಟ್ಟಿದ್ದರು. ಮೆಲ್ಲನೆ ಮಂಚದ ಮೇಲೆ ಹತ್ತಿ, ಹಾರಿ ಒಂದು ರೂಪಾಯಿ ಜಾರಿಸಿಬಿಟ್ಟೆ' ಎಂದು ಮೆಲ್ಲನೆ ಶ್ಯಾಮಣ್ಣ ಅತ್ತ ಇತ್ತ ನೋಡಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಂಡು ಹೇಳಿದ.

ಪೆಟ್ಟಿಗೆ ಅಥವಾ ಕಪಾಟು ವಿಶೇಷವಾಗಿ ನಮ್ಮ ಮನೆಯಲ್ಲಿರಲಿಲ್ಲ. ಚಿಲ್ಲರೆ ಹಣಕಾಸೇನಾದರೂ ಬಂದರೆ ಒಂದು ಎತ್ತರದ ಹಲಗೆಯ ಮೂಲೆಯಲ್ಲಿ ಇಟ್ಟುಬಿಡುತ್ತಿದ್ದರು. ಹಿಂದಿನ ದಿನ ಚಿಕ್ಕಪ್ಪ ಹುಲ್ಲು ಮಾರಿದ್ದರು. ಆ ಹಣವನ್ನು ಅಂಗಡಿಯ ಸಾಲಕ್ಕೆ ಕಳುಹಿಸಲಿಕ್ಕಾಗಿ ಇಟ್ಟಿದ್ದರು.ಶ್ಯಾಮಣ್ಣ ನಿಗೆ ಹೇಗೆ ಅದರ ಪತ್ತೆಯಾಯಿತೆಂದು ಗೊತ್ತಿಲ್ಲ. ಮನೆಯ ಜನರೆಲ್ಲ ಬೇರೆ ಬೇರೆ ಕಾಮಗಾರಿಯಲ್ಲಿ ಮಗ್ನರಾಗಿದ್ದಾಗ ,ಮಂಚವನ್ನು ನೆಟ್ಟಗೆ ಮಾಡಿ ಹತ್ತಿ ಶ್ಯಾಮಣ್ಣ ಒಂದು ರೂಪಾಯಿ ಜಾರಿಸಿಯೇಬಿಟ್ಟಿದ್ದ.

ಆವರೆಗೆ ಇಡೀ ಒಂದು ರೂಪಾಯಿಯನ್ನು ಸರಿಯಾಗಿ ನಾವು ನೋಡಿದ್ದೇ ಇಲ್ಲ. ಹಾಗಾಗಿ ಅದನ್ನು ನೋಡಿದೊಡನೆಯೇ ಹೃದಯದಲ್ಲಿ ಎದ್ದುಬಂದ ಆನಂದ ಮತ್ತು ಭಯದ ತರಂಗಗಳು ನಮ್ಮ ಶಕ್ತಿಯನ್ನು ಮೀರುವಂತಿದ್ದವು. ನಮ್ಮ ಅಮ್ಮನಿಗೆ ಒಂದು ರೂಪಾಯಿಯೆಂದರೆ ತೀರ ಅಲಭ್ಯ ವಸ್ತುವಾಗಿತ್ತು. ನಮ್ಮ ಮಾಸ್ತರರಿಗೆ ಸಹ ನಮ್ಮಲ್ಲಿಂದ ಬರೇ ಎಂಟಾಣೆ ಸಿಗುತ್ತಿತ್ತು. ತಿಂಗಳ ಅಖೈರಿಗೆ ಹೆಚ್ಚಾಗಿ ಚಿಕ್ಕಪ್ಪನೇ ಹೋಗಿ ಆ ಹಣ ಕೊಟ್ಟು ಬರುತ್ತಿದ್ದರು.

ಭೇಷ್ ! ಆ ದಿನ ನಮ್ಮ ಗರ್ವದ ಭಾರವನ್ನು ಯಾರಿಂದ ಅಳೆಯಲಿಕ್ಕೆ ಸಾಧ್ಯ ? ಆದರೆ ಒಂದು ತರದ ಭಯವು ಮಾತ್ರ ಆನಂದದ ಮಧ್ಯದಲ್ಲಿ ವಿಘ್ನವನ್ನು ತಂದೊಡ್ಡುತ್ತಿತ್ತು. ನಮ್ಮ ಮನೆಯಲ್ಲಿ ಲೆಕ್ಕವಿಲ್ಲದ ರೂಪಾಯಿಗಳೇನೂ ಇದ್ದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಗಾಗಿ ಕಳ್ಳತನದ ಪತ್ತೆಯು ಆಗಿಯೇ ಆಗಬಹುದು! ಚಿಕ್ಕಪ್ಪನ ಕೋಪದ ಪರಿಚಯ ನನಗಷ್ಟು ಇಲ್ಲಪಾದರೂ ಶ್ಯಾಮಣ್ಣನಿಗೆ ಧಾರಾಳ ಆಗಿತ್ತು. ಚಿಕ್ಕಪ್ಪ ಸಾಧಾರಣವಾಗಿ ಸಾಧು ಹಾಗೂ ಸರಳ ಸ್ವಭಾವದ ಮನುಷ್ಯರಾಗಿದ್ದರು. ಚಿಕ್ಕಮ್ಮ ಅವರ ಯೋಗಕ್ಷೇಮವನ್ನು ಸರಿಯಾಗಿ ನೋಡಿ ಕೊಳ್ಳದಿರುತ್ತಿದ್ದರೆ ಪೇಟೆಯಲ್ಲಿ ಯಾರಾದರೊಬ್ಬ ಮಾರ್ವಾಡಿಯು ಅವರನ್ನು ಮಾರಿಯೂಬಿಡಬಹುದಿತ್ತು. ಅಂತಹ ಸಾಧುಪುರುಷ ಅವರಾಗಿದ್ದರು. ಆದರೆ ಮಾತ್ರ, ಕೋಪ ಬಂದುಬಿಟ್ಟರೆ ದೊಡ್ಡ ಹೆಬ್ಬುಲಿ! ಮತ್ತೆ ಕೇಳುವುದೇ ಬೇಡ.. ಅವರಿಗೆ ಯಾವುದೂ ಕಣ್ಣಿಗೆ ಗೋಚರವಾಗುತ್ತಿದ್ದಿಲ್ಲ. ಚಿಕ್ಕಮ್ಮನೂ ಕೂಡ ಅವರ ಮುಂದೆ ಬರಲಿಕ್ಕೆ ಹೆದರುತ್ತಿದ್ದರು.

ನಾನು ಮತ್ತು ಶ್ಯಾಮಣ್ಣ ಈ ವಿಚಾರವನ್ನೆಲ್ಲ ಬಹುಹೊತ್ತಿನವರೆಗೆ ವಿಮರ್ಶೆ ಮಾಡಿದೆವು. ಕೊನೆಗೆ ಕೈಗೆ ಬಂದ ಭಾಗ್ಯಲಕ್ಷ್ಮಿಯನ್ನು ಹೋಗಬಿಡಬಾರದೆಂದು ನಿಶ್ಚಯವಾಯಿತು. ಒಂದನೆಯದಾಗಿ, ನಮ್ಮ ಮೇಲೆ ಸಂಶಯವೇ ಬರಲಾರದು. ಅಥವಾ ಒಂದುವೇಳೆ ಸಂದೇಹ ತೋರಿದರೂ, ನಮಗೆ ಸರ್ವಥಾ ಗೊತ್ತೇ ಇಲ್ಲವೆಂದು ನಿರಾಕರಿಸಿಬಿಡೋಣ —ಹೀಗೆಲ್ಲ ನಿರ್ಧಾರ ಮಾಡಿಕೊಂಡೆವು.

ಕೈಮುಖ ತೊಳೆದುಕೊಂಡು ನಾವಿಬ್ಬರೂ ಮನೆಗೆ ಬಂದೆವು. ಹೆದರಿ ಹೆದರಿಯೇ ಒಳಗೆ ಕಾಲಿಟ್ಟೆವು. ಅಷ್ಟರಲ್ಲಿಯೇ ಹುಡುಕಾಟದ ರಣಭೇರಿಯು ಕೇಳಿ ಬಂದುಬಿಟ್ಟರೆ—

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವರೇ ಬದುಕಿಸಬೇಕು! ಆದರೆ ಎಲ್ಲರೂ ಅವರವರ ಕೆಲಸದಲ್ಲಿ ಮಗ್ನರಾಗಿದ್ದರು. ನಮ್ಮೊಡನೆ ಯಾರೂ ಮಾತಾಡಲಿಲ್ಲ. ನಾವು ಬಗಬಗನೆ ಗಂಜಿ ಊಟ ತೀರಿಸಿಕೊಂಡು ಬುತ್ತಿ ಕಟ್ಟಿಕೊಂಡು, ಬಗಲಲ್ಲಿ ಕೈಗೆ ಸಿಕ್ಕಿದ ಪುಸ್ತಕ ತುರುಕಿಸಿಕೊಳ್ಳುತ್ತ ನಡೆದೇಬಿಟ್ಟೆವು.

ಆಕಾಶದಲ್ಲಿ ಮೋಡ ಮುಚ್ಚಿತ್ತು. ನಾವಿಬ್ಬರೂ ಸಂತೋಷದಿಂದ ಶಾಲೆಗೆ ಹೋಗುತ್ತಿದ್ದೆವು. ವಿಶಾಲ ರಾಜ್ಯದ 'ಮಿನಿಸ್ಟರ್' ಪದವಿಯಿಂದಲೂ ಅಷ್ಟೊಂದು ಗರ್ವ ಒದಗಲಾರದು! ದಾರಿಯಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಕಲ್ಪಿಸುತ್ತಿದ್ದೆವು. ಹಾಗೆಯೇ ಹಲವಾರು ಗಾಳಿಗೋಪುರಗಳನ್ನೂ ಕಟ್ಟುತ್ತಿದ್ದೆವು. ಪದೇ ಪದೇ ಆ ರೂಪಾಯಿ ನಾಣ್ಯವನ್ನು ಮುಟ್ಟಿ ನೋಡುತ್ತಿದ್ದೆವು. ಈ ಸುವರ್ಣಸಂದರ್ಭವು ಅಪೂರ್ವಭಾಗ್ಯದಿಂದ ಒದಗಿಬಂದಿತ್ತು. ಜೀವನದಲ್ಲಿ ಇನ್ನಿಂತಹ ಸಂದರ್ಭ ಬರುವುದು ಬಹು ಕಷ್ಟ. ಆದ್ದರಿಂದ ಆದಷ್ಟು ಹೆಚ್ಚು ದಿನಗಳವರೆಗೆ ಬರಬಹುದಾದ ರೀತಿಯಲ್ಲಿ ಆ ರೂಪಾಯಿಯನ್ನು ಖರ್ಚು ಮಾಡುವ ಯೋಚನೆ ಮಾಡಿದೆವು. ಅಂದಿನ ದಿನಗಳಲ್ಲಿ ನಾಲ್ಕಾಣೆಗೊಂದು ಸೇರು ಮಿಠಾಯಿ ಸಿಗುತ್ತಿತ್ತು. ಅರ್ಧ ತಪ್ಪಿದರೆ ಮುಕ್ಕಾಲು ಸೇರಿನಲ್ಲಿ ನಮಗಿಬ್ಬರಿಗೂ ಸಂಪೂರ್ಣ ತೃಪ್ತಿಯಾಗುತ್ತಿತ್ತು. ಆದರೆ ಅಷ್ಟರಲ್ಲಿ ಮತ್ತೊಂದು ಯೋಚನೆ ಬಂತು. ಸೇರುಗಟ್ಟಲೆ ಮಿಠಾಯಿ ತೆಗೆದುಕೊಂಡರೆ ರೂಪಾಯಿ ಬೇಗನೆ ಕರಗಿಹೋಗಬಹುದು. ಆದಕಾರಣ ಯಾವುದಾದರೂ ಅಗ್ಗದ ಸಾಮಾನು ಕೊಂಡು

Sri Vidyabharathi Book Centre, Sringeri

CC-0. In Public Domain. Digitized by eGangotri

ಕೊಳ್ಳಬೇಕು. ಅದರಿಂದ ಹೊಟ್ಟೆಯೂ ತುಂಬಬೇಕು; ರುಚಿಯೂ ಆಗಿರಬೇಕು; ಹಣವೂ ಹೆಚ್ಚು ಖರ್ಚಾಗ ಬಾರದು. ಹಾಗಾಗಿ ಖರ್ಜೂರದ ಮೇಲೆ ನಮ್ಮ ಯೋಚನೆ ಹರಿಯಿತು. ಆ ವಿಚಾರದಲ್ಲಿ ಇಬ್ಬರ ಒಪ್ಪಿಗೆಯೂ ದೊರೆಯಿತು.

ಶಾಲೆಯ ಹತ್ತಿರದ ಮುದಿ ಶೆಟ್ಟಿಯ ಅಂಗಡಿಗೆ ಹೋಗಿ ಎರಡಾಣೆಯ ಖರ್ಜೂರ ತೆಗೆದುಕೊಂಡೆವು. ಅದು ಅಗ್ಗದ ಕಾಲವಾಗಿತ್ತು. ಸೇರಿಗೆ ಒಂದಾಣೆ. ಹಾಗಾಗಿ ಹಣ್ಣಿನ ಕಟ್ಟಿನಿಂದ ಚೀಲ ತುಂಬಿಬಂತು. ಶ್ಯಾಮಣ್ಣನು ಒಂದು ಖರ್ಜೂರದ ಬೀಜವನ್ನು ಬಾಯಿಗೆ ಹಾಕಿಕೊಂಡು ಶೆಟ್ಟಿಯ ಕೈಯಲ್ಲಿ ರೂಪಾಯಿಯನ್ನಿಟ್ಟನು. ಶೆಟ್ಟಿ ಸಂದೇಹದೃಷ್ಟಿಯಿಂದ ನೋಡಿ—'ಎಲ್ಲಿಂದ ರೂಪಾಯಿ ಸಿಕ್ಕಿತು ಮಗೂ? ಕದ್ದು ಗಿದ್ದು ತಂದಿಲ್ಲವಷ್ಟೆ?' ಎಂದು ಮೆದು ಮಾತುಗಳಿಂದ ಕೇಳಿದನು.

ಉತ್ತರನಮ್ಮ ಹತ್ತಿರ ತಯಾರಾಗಿಯೇ ಇತ್ತು. ಹೆಚ್ಚಿಲ್ಲ ಪಾದರೂ ಎರಡು ಮೂರು ಪುಸ್ತಕ ಓದಿ ಮುಗಿಸಿದ್ದೆವು. ವಿದ್ಯೆಯ ಪ್ರಭಾವ ಸ್ವಲ್ಪಸ್ವಲ್ಪವಾಗಿ ನಮ್ಮಲ್ಲೇರಿ ಬಂದಿತ್ತು. ಹಾಗಾಗಿ ಕೂಡಲೇ ನಾನು—'ಮಾಸ್ಟರರಿಗೆ ಫೀಸು ಕೊಡ ಲಿಕ್ಕಿದೆ. ಮನೆಯಲ್ಲಿ ಚಿಲ್ಲರೆ ಇರಲಿಲ್ಲ. ಹಾಗಾಗಿ ಚಿಕ್ಕಪ್ಪ ಇಡೀ ರೂಪಾಯಿ ಕೊಟ್ಟುಬಿಟ್ಟರು' ಎಂದು ಸರಾಗವಾಗಿ ನುಡಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದರಿಂದ ಶೆಟ್ಟಿಯ ಸಂದೇಹ ನಿವಾರಣೆಯಾಯಿತು. ಅಲ್ಲಿಂದ ಹೊರಟು ಸ್ವಲ್ಪ ದೂರದಲ್ಲಿರುವ ಸಂಕದ ದಂಡೆಯ ಮೇಲೆ ಕೂತು ಸರಿಯಾಗಿ ಖರ್ಜೂರ ತಿಂದೆವು. ಆದರೆ ಇನ್ನುಳಿದ ಹದಿನಾಲ್ಕಾಣೆಯನ್ನೇನು ಮಾಡುವುದು ? ಒಂದು ಇಡೀ ರೂಪಾಯಿಯನ್ನಾದರೂ ಅಡಗಿಸಿಟ್ಟುಕೊಳ್ಳುವುದು ಅಷ್ಟು ಕಷ್ಟವಾಗಿದ್ದಿಲ್ಲ. ಈಗ ಹಣದ 'ಕಣ ಕಣ' ಶಬ್ದ ಹೇಗೆ ಕೇಳದೆ ಹೋಗುತ್ತದೆ? ಸೊಂಟದಲ್ಲಿಯೂ ಅದನ್ನು ಅಡಗಿಸಲು ಅವಕಾಶವಿದ್ದಿಲ್ಲ. ಜೇಬಿನಲ್ಲಿಯೂ ಸರಿಯಾದ ಸ್ಥಳವಿದ್ದಿಲ್ಲ. ಆ ಚಿಲ್ಲರೆ ಹಣವನ್ನು ಕೈಯಲ್ಲಿಟ್ಟುಕೊಳ್ಳುವುದೆಂದರೆ ನಮ್ಮ ಕಳ್ಳತನದ ಡಂಗುರ ಬಾರಿಸಿದಂತೆಯೇ ಸರಿ. ಬಹಳ ಯೋಚನೆ ಮಾಡಿದ ಬಳಿಕ ಇದರಲ್ಲಿ ಎಂಟಾಣೆಯನ್ನು ಮಾಸ್ಟರರಿಗೆ ಫೀಸಿಗಾಗಿ ಕೊಟ್ಟು, ಉಳಿದ ಆರಾಣೆಯಿಂದ ಮಿಠಾಯಿ ತೆಗೆದು ತಿನ್ನುವುದೆಂದು ನಿಶ್ಚಯ ಮಾಡಿದೆವು.

ಕೊನೆಗೆ ಹೇಗೂ ಕ್ಲಾಸಿಗೆ ಸೇರಿದೆವು. ಅಂದು ನಾಲ್ಕಾರು ದಿನ ದಾಟಿದ ಬಳಿಕ ನಾವು ಶಾಲೆಗೆ ಬಂದಿದ್ದೆವು. ಹಾಗಾಗಿ 'ಇಷ್ಟು ದಿನ ಎಲ್ಲಿ ಹೋಗಿದ್ದಿರಿ?' ಎಂದು ಕಣ್ಣು ಕೆಂಪಗೆ ಮಾಡಿ ಮಾಸ್ಟರರು ಕೇಳಿದರು. 'ನಮಗಿಬ್ಬರಿಗೂ ಜ್ವರ, ಶೀತ' ಎಂದು ಮುಖ ಬಾಡಿಸಿಕೊಂಡು ನಾನು ಹೇಳಿದೆ; ಹಾಗೆ ಹೇಳುತ್ತಾ ಎಂಟಾಣೆಯನ್ನು ಮೇಜಿನ ಮೇಲಿಟ್ಟೆ. ಹಣ ನೋಡಿದೊಡನೆಯೇ ಅವರ ಮುಖ ಅರಳಿತು. ತಿಂಗಳು ಮುಗಿಯಲಿಕ್ಕೆ ಇನ್ನೂ ಕೆಲ ದಿನಗಳಿದ್ದವು. ಸಾಧಾರಣವಾಗಿ ತಿಂಗಳು ಮುಗಿದು ಪುನಃ ಜೇಬು ತುಂಬಿದ ಬಳಿಕವೇ

Sri Vidyabhandar Book Centre, Shringeri

CC-0. In Public Domain. Digitized by eGangotri

ಎಲ್ಲಿಯಾದರೂ ಹಣ ಬರುತ್ತಿತ್ತು. ಇಂದೀಗ ಸುಲಭದಿಂದ ಹಣ ಬಂದುದು ನೋಡಿ ಅವರು ಸಂತೋಷಪಟ್ಟುದು ಅಸ್ವಾಭಾವಿಕವೇನೂ ಅಲ್ಲ. ನಾವೂ ಇತರ ಮಕ್ಕಳನ್ನು ಒಂದು ತರದ ಗರ್ವಯುಕ್ತ ದೃಷ್ಟಿಯಿಂದ ನೋಡಿದೆವು. ನೀವೆಲ್ಲ ಬಾರಿ ಬಾರಿ ಕೇಳಿದರೂ ಫೀಸು ಕೊಡುವುದಿಲ್ಲ. ನಾವಾದರೆ ಕೇಳದೆಯೇ ತಂದುಕೊಡುತ್ತೇವೆ—ಎಂದು ಹೇಳುತ್ತಿರುವೆವೋ ಎಂಬಂತಿತ್ತು ನಮ್ಮ ದೃಷ್ಟಿಯಲ್ಲಿನ ಗರ್ವ!

ಅರ್ಧ ಪಾಠವಾಗುವಾಗಲೇ ತಿಳಿದುಹೋಯಿತು—ಅಂದು ಮೂಡುಬಿಟ್ಟ ದೇವಸ್ಥಾನದಲ್ಲಿ ಕೆರೆದೀಪೋತ್ಸವ; ಅದರಿಂದಾಗಿ ಮಧ್ಯಾಹ್ನದ ಮೇಲೆ ರಜೆ. ಈ ಸಮಾಚಾರ ತಿಳಿದೊಡನೆಯೇ ನಮಗಾದ ಸಂತೋಷಕ್ಕೆ ಮಿತಿಯೇ ಉಳಿಯಲಿಲ್ಲ. ಎಂಟಾಣೆ ಫೀಸು ಕೊಟ್ಟಾಗಿತ್ತು. ಉಳಿದ ಆರಾಣೆಯಲ್ಲಿ ಉತ್ಸವ ನೋಡುವ ಯೋಚನೆ ಬಂತು. ಚೆನ್ನಾಗಿ ಮಜಾ ಮಾಡಬೇಕು! ನೆಲಗಡಲೆ ಹೊಡೆಯಬೇಕು! ಹುರಿಯಕ್ಕಿ ತಿನ್ನಬೇಕು! ತೊಟ್ಟಿಲನ್ನು ಏರಬೇಕು! ಮತ್ತೆ ಮೆಲ್ಲನೆ ಕತ್ತಲಾಗುವಾಗ ಮನೆ ಸೇರಬೇಕು.

ಆದರೆ ಮಾಸ್ಟರು ಮಾತ್ರ ಒಂದು ಕಠಿಣ ಶರ್ತ ಹಾಕಿಬಿಟ್ಟಿದ್ದರು. ಎಲ್ಲ ಹುಡುಗರೂ ಶಾಲೆ ಬಿಟ್ಟು ಹೊರಡುವ ಮೊದಲು $16 \times 16 = 256$ ರವರೆಗೆ ಮಗ್ಗಿ ಕೋಷ್ಟಕ ಕಲಿತು ಹೇಳಬೇಕು. ಯಾರು ಹೇಳುವುದಿಲ್ಲವೋ ಅವರಿಗೆ ಉತ್ಸವದ ರಜೆಯಿಲ್ಲವೆಂದು ಗದರಿಸಿ ಹೇಳಿದ್ದರು. ಇದರ ಪರಿಣಾಮವೇನಾಯಿತೆಂದರೆ ನನಗೆ ರಜೆ ಸಿಕ್ಕಿಹೋಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೆ ಶ್ಯಾಮಣ್ಣನು ಕೈದಿಯಾಗಿ ನಿಲ್ಲಿಸಲ್ಪಟ್ಟನು.

ಹಲವು ಮಕ್ಕಳು ಮಗ್ಗಿ ಹೇಳಿ ಹಾಗೆಯೇ ಉತ್ಸವ ನೋಡಲು ಹೊರಟೇಬಿಟ್ಟರು. ನಾನು ಕೂಡ ಅವರೊಡನೆ ಸೇರಿದೆ. ಹಣ ನನ್ನ ಕೈಯಲ್ಲಿತ್ತು. ಹಾಗಾಗಿ ಶ್ಯಾಮಣ್ಣನನ್ನು ಒಟ್ಟಿಗೆ ಕರಕೊಂಡು ಹೋಗಲಿಕ್ಕಾಗಿ ಹೆಚ್ಚಿಗೆ ಕಾದು ನಿಲ್ಲಲಿಲ್ಲ. ಅವನಿಗೆ ಬಿಡುಗಡೆಯಾದೊಡನೆಯೇ ದೇವಸ್ಥಾನದ ಬಳಿ ಆತ ಬರುವುದು; ಬಳಿಕ ಇಬ್ಬರೂ ಸೇರಿಕೊಂಡು ಉತ್ಸವದ ಮಜಾ ಮಾಡುವುದು—ಎಂದು ನಮ್ಮೊಳಗೆ ನಿರ್ಣಯವಾಯಿತು. ಅವನು ಬರುವವರೆಗೆ ನಾನು ಒಂದು ಕಾಸು ಕೂಡಾ ಖರ್ಚು ಮಾಡುವುದಿಲ್ಲವೆಂದು ಆತನಿಗೆ ಭಾಷೆ ಕೊಟ್ಟಿದ್ದೆ.

ದೇವಸ್ಥಾನದ ರಥಬೀದಿಗೆ ನಾನು ಹೋಗಿ ಸೇರಿದೆ. ಆದರೆ ಅಲ್ಲಿ ಒಂದು ಗಂಟೆ ಕಳೆದರೂ ಶ್ಯಾಮಣ್ಣನ ಪತ್ತೆಯಿಲ್ಲ! ಅಲ್ಲ, ಒಂದು ವೇಳೆ ಮಾಸ್ಟರರೇ ಬಿಡುಗಡೆ ಮಾಡಿಲ್ಲವೇ? ಅಥವಾ ಅವನಿಗೆ ರಸ್ತೆ ತಪ್ಪಿಹೋಯಿತೇ? ಕಣ್ಣುಗಳನ್ನು ಅರಳಿಸಿಕೊಂಡು ಚೆನ್ನಾಗಿ ಕುತ್ತಿಗೆಯನ್ನೆತ್ತಿ ಅವನು ಬರುವ ರಸ್ತೆಯನ್ನೇ ನೋಡುತ್ತಿದ್ದೆನು. ಒಬ್ಬಂಟಿಗನಾಗಿ ಸಂತೆ ಅಂಗಡಿಗಳನ್ನು ನೋಡಲಿಕ್ಕೂ ಮನಸ್ಸಿಗೆ ಇಷ್ಟವಾಗುತ್ತಿರಲಿಲ್ಲ. ಒಂದು ವೇಳೆ ಕಳ್ಳತನದ ಪತ್ತೆಯಾಗಿಹೋಯಿತೇ? ಹಾಗೆಯೇ ಚಿಕ್ಕಪ್ಪ ಶ್ಯಾಮಣ್ಣನನ್ನು ಹಿಡಿದು ಮನೆಗೆ ಎಳೆದುಕೊಂಡು ಹೋದರೇ?—ಈ ಮೊದಲಾದ ಸಂಶಯವೂ ಮೂಡಲಾರಂಭಿಸಿತು. ಕ್ರಮೇಣ ಹೊತ್ತು ಇಳಿಯತೊಡ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಿತು. ಕೊನೆಗೆ ಅರ್ಧಾಣೆಯ ನೆಲಗಡಲೆಯನ್ನು ಕೊಂಡು ಜೇಬಿನಲ್ಲಿ ಹಾಕಿಕೊಂಡೆ. ಬಳಿಕ ಒಂದೊಂದನ್ನೇ ಮೆಲುಕಾಡುತ್ತ ದಾರಿಯನ್ನು ನೋಡುತ್ತಾ ಹಿಂದೆ ಹೊರಟೆ. ಉಳಿದ ಹಣ ಹಾಗೆಯೇ ಜೇಬಿನಲ್ಲಿತ್ತು. ಹೌದು ; ಐದೂವರೆ ಆಣೆ ! ಮುಟ್ಟಿ ನೋಡಿದೆ.

ದಾರಿಯಲ್ಲಿ ಯೋಚನೆ ಬಂತು. ಶಾಲೆಯ ದಾರಿಯಿಂದಾಗಿಯೇ ಹೋಗಿಬಿಡುವುದು ಒಳ್ಳೆಯದು. ಒಂದು ವೇಳೆ ಶ್ಯಾಮಣ್ಣನು ಆಗಲೂ ಅಲ್ಲಿಯೇ ಇದ್ದುಬಿಟ್ಟಿದ್ದರೆ !

ಆದರೆ ಶಾಲೆಯಲ್ಲಿ ಸಂಪೂರ್ಣ ನಿಶ್ಶಬ್ದ ಆವರಿಸಿತ್ತು. ಆಗ ಅಲ್ಲೇ ಆಡುತ್ತಿದ್ದ ಹುಡುಗನೊಬ್ಬ ಸಿಕ್ಕಿದ. ನನ್ನನ್ನು ನೋಡಿದೊಡನೆಯೇ ಜೋರಾಗಿ ಬೊಬ್ಬಿಡುತ್ತ ಹೇಳಲಾರಂಭಿಸಿದ : 'ಬದುಕಿ ಉಳಿದಿರುವೆಯಾ ? ಮನೆಗೆ ಹೋಗಿ ನೋಡು — ಎಂತಹ ಛಡಿ ಬೀಳುತ್ತದೆ ! ಹಾಂ ! ನಿನ್ನ ಚಿಕ್ಕಪ್ಪ ಬಂದಿದ್ದರು ! ಹೊಡೆದು ಬಡಿದು ಶ್ಯಾಮಣ್ಣನನ್ನು ಎಳಕೊಂಡೇ ಹೋದರು ! ಆಹಾ ! ಎಂತಹ ಛಡಿ ! ನೀವು ಮಾಸ್ಟರರಿಗೆ ಫೀಸು ಕೊಟ್ಟಿದ್ದಿರಲ್ಲವೇ ? ಅದನ್ನು ಸಹ ತೆಗೆದುಕೊಂಡು ಹೋದರು. ಈಗ ಏನಾದರೂ ಒಳ್ಳೆಯ ಉಪಾಯ ಯೋಚಿಸಿಕೊಂಡು ಹೋಗು. ಇಲ್ಲವಾದರೆ ನಿನಗೂ ಒಳ್ಳೆಯ ಫಲಾಹಾರ ಕಾದಿರಬಹುದು !'

ನನ್ನ ಯೋಚನೆ ಗೀಚನೆ ಎಲ್ಲಾ ಹಾರಿಯೇ ಹೋಯಿತು. ದೇಹದ ರಕ್ತವೇ ಒಣಗತೊಡಗಿತು. ನನಗೆ ಯಾವ ಸಂದೇಹ ಬಂದಿತ್ತೋ ಅದು ಆಗಿಯೇಹೋಗಿದೆ ! ಕೈಕಾಲುಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಮಣಗಟ್ಟಲೆ ಭಾರವಾಗಿ ತೋರಿಬರಲಾರಂಭಿಸಿತು! ಮನೆಯ ಕಡೆ ಒಂದೊಂದು ಹೆಜ್ಜೆಯಿಡುವುದೂ ಬಹಳ ಕಷ್ಟಕರವಾಯಿತು. ದೇವಿದೇವತೆಗಳ ಏನೆಲ್ಲ ಹೆಸರು ಗೊತ್ತಿತ್ತೋ ಅವೆಲ್ಲವನ್ನೂ ಸ್ಮರಿಸುತ್ತ ಹೋದೆ. ಅವರಿಗೆಲ್ಲ ಬೇರೆ ಬೇರೆ ಹರಕೆಗಳನ್ನು ಹೇಳುತ್ತಲೂ ಹೋದೆ. ಹಾಗೂ ಹೀಗೂ ನಮ್ಮ ಗ್ರಾಮ ಹತ್ತಿರವಾಗುತ್ತ ಬಂತು. ಅಲ್ಲಿ ಗ್ರಾಮದೇವತೆಗೆ ಕೈಮುಗಿದೆ. ನಮ್ಮ ದೃಷ್ಟಿಯಲ್ಲಿ ಆಗ ಗ್ರಾಮದೇವತೆಯ 'ಕಾರಣಿಕ' ಬಹಳವಾದುದು !

ಅದೆಲ್ಲ ಮಾಡಿಯಾಯಿತು. ಆದರೂ ಮನೆ ಹತ್ತಿರವಾಗುತ್ತ ಬಂದಂತೆಯೇ ನನ್ನ ಎದೆಬಡಿತವು ಜೋರಾಗ ತೊಡಗಿತು. ಶ್ವಾಸವೇ ಕಟ್ಟಿಬಂದಂತಾಗುತ್ತಿತ್ತು ! ಮೇಲೆ ಕರಿದಾದ ಮೋಡ ತುಂಬಿ ಬರುತ್ತಿತ್ತು. ಆಕಾಶವೇ ಒಡೆದು ಬೀಳುತ್ತದೋ ಎಂಬಂತಾಗುತ್ತಿತ್ತು ! ಜನರೆಲ್ಲರೂ ಹೊಲದ ಕೆಲಸ ಮುಗಿಸಿ ಮನೆಯಕಡೆ ಉತ್ಸಾಹದಿಂದ ಸಾಗುತ್ತಿದ್ದರು. ದನಕರುಗಳು ಸಹ ಬಾಲವನ್ನೆತ್ತಿ ಹಟ್ಟಿಯತ್ತ ನೆಗೆದುಕೊಂಡು ಹೋಗುತ್ತಿದ್ದವು. ಹಕ್ಕಿಗಳೂ ಹುರುಪಿನಿಂದ ಗೂಡಿನತ್ತ ಹಾರುತ್ತಿದ್ದವು. ಆದರೆ ನಾನು ಮಾತ್ರ ಭಾರವಾದ ಕಾಲುಗಳನ್ನೆತ್ತಿಕೊಂಡು ಮೆಲ್ಲನೆ ಸರಿಯುತ್ತಿದ್ದೆ. ಕಾಲಲ್ಲಿ ಬಲವೇ ಇರಲಿಲ್ಲ. ಆಗ, ಜೋರಾದ ಜ್ವರ ಬರಲಿ, ಅಥವಾ ಏನಾದರೂ ದೊಡ್ಡ ಪೆಟ್ಟು ತಾಗಲಿ—ಎಂಬುದಾಗಿ ಒಮ್ಮೊಮ್ಮೆ ತೋರುತ್ತಿತ್ತು. ಆದರೆ ಹೇಳಿದೊಡನೆಯೇ ಕಾಯಿಲೆ

Sri Vidyabharathi Book Centre, Sringeri

ಬರುವುದೇ ? ಕರೆದೊಡನೆಯೇ ಯಮ ಬರುವನೇ ?

CC-O. In Public Domain. Digitized by eGangotri

ಯೊವುದೂ ಆಗಲಿಲ್ಲ.

ಮೆಲ್ಲಮೆಲ್ಲನೆ ಸಾಗಿದರೂ ಸಹ ಮನೆ ಬಂದೇ ಬಂತು. ಈಗೇನು ಮಾಡಲಿ? ನಮ್ಮ ಮನೆಯಿದುರಲ್ಲಿ ದೊಡ್ಡ ಮಾವಿನ ಮರವಿತ್ತು. ನಾನದರ ಎಡೆಯಲ್ಲಿ ಹೋಗಿ ಅವಿತು ಕೂತುಕೊಂಡೆ. ಕತ್ತಲೆಯಾದಮೇಲೆ ಪಕ್ಕನೆ ಮನೆಯೊಳಗೆ ನುಗ್ಗಿಬಿಟ್ಟು ಅಮ್ಮನ ಮಂಚದಡಿಯಲ್ಲಿ ಸೇರಿಬಿಡುವುದೆಂದು ಯೋಚಿಸಿದೆ. ಎಲ್ಲರೂ ಮಲಗಿಯಾದಮೇಲೆ ಅಮ್ಮನ ಹತ್ತಿರ ಅಳುತ್ತ ಎಲ್ಲ ಕಥೆಯನ್ನೂ ಹೇಳಿಬಿಡುವುದು. ಅಮ್ಮ ಯಾವಾಗಲೂ ಹೊಡೆಯುವುದಿಲ್ಲ. ಅದರಲ್ಲೂ ಅತ್ತುಬಿಟ್ಟರೆ ಮೆತ್ತಗಾಗುವರು. ರಾತ್ರಿಯೊಂದುದಾಟಿಬಿಟ್ಟರೆ ಮತ್ತಾರು ಕೇಳುತ್ತಾರೆ? ಬೆಳಗಾಗುವಾಗ ಎಲ್ಲರ ಕೋಪವೂ ತಣ್ಣಗಾಗಬಹುದು. ಹೀಗೆ ನನ್ನ ಯೋಚನೆ ಸಫಲವಾದರೆ ಛಡಿಗಳಿಲ್ಲದೆ ನಾನು ಬದುಕಲೂಬಹುದು.

ಆದರೆ ದೈವಸಂಕಲ್ಪ ಬೇರೆಯೇ ಇತ್ತು. ನನ್ನನ್ನು ದನ ಮೇಯಿಸುವ ಹುಡುಗ, ಪಾರ, ನೋಡಿಯೇಬಿಟ್ಟ. ನನ್ನ ಹೆಸರನ್ನು ಗಟ್ಟಿಯಾಗಿ ಒದರುತ್ತ ಮನೆಯೊಳಗೆ ನುಗ್ಗಿದ. ಈಗ ನನ್ನ ಭವಿಷ್ಯದ ವಿಚಾರದಲ್ಲಿ ಆಸೆಯೇ ಉಳಿದಿಲ್ಲ. ಗತಿಯಿಲ್ಲದೆ, ಅಯ್ಯಯ್ಯೋ !!—ಎಂದು ನಾನು ದೊಡ್ಡ ಬೊಬ್ಬೆ ಹೊಡೆದೆ. ಪೆಟ್ಟು ತಿಂದ ನಾಯಿ ಇನ್ನಾರಾದರೂ ಹೊಡೆಯಬಂದಾಗ ಜೋರಾಗಿ ಕೂಗಾಡುವಂತೆ ನನ್ನ ಸ್ಥಿತಿಯಾಗಿತ್ತು.

Sri Vidyabharathi Book Centre, Sringeri
ಹೊರಜಗುಲಿಯಲ್ಲಿ ಅಪ್ಪ ಕೂತುಕೊಂಡಿದ್ದರು. ಅವರ

CC-O. In Public Domain. Digitized by eGangotri

ಆರೋಗ್ಯ ಇತ್ತೀಚೆಗೆ ಅಷ್ಟು ಚೆನ್ನಾಗಿರಲಿಲ್ಲ. ಹಾಗಾಗಿ ಕೋಪವು ಮೂಗಿನ ತುದಿಯಲ್ಲೇ ಸದಾ ಸಿದ್ಧವಿತ್ತು. ಒಂದು ತಿಂಗಳು ರಜೆ ತೆಗೆದುಕೊಂಡು ನಗರದಿಂದ ಅವರು ಮನೆಗೆ ಬಂದಿದ್ದರು. ಅವರು ಕೊಡುವ ಶಿಕ್ಷೆ ಯಾವ ತರದ್ದೆಂದು ಹೇಳಬರುವಂತಿದ್ದಿಲ್ಲ. ಅಪ್ಪನ ಹತ್ತಿರ ನಮ್ಮ ಹಳ್ಳಿಯ ಇತರ ನಾಲ್ಕಾರು ಜನರೂ ಕೂತು ಮಾತಾಡುತ್ತಿದ್ದರು.

ನನ್ನನ್ನು ನೋಡಿದೊಡನೆಯೇ ಅಪ್ಪ ಕೆಳಕ್ಕೆ ಹಾರಿ 'ಈ ವರೆಗೆ ಎಲ್ಲಿದ್ದೆ, ಪೋರಾ?' ಎಂದು ಕಣ್ಣು ಕೆಂಪು ಮಾಡಿ ಕೇಳಿದರು. ನನಗೆ ಆಕಾಶ-ಪಾತಾಳವೆಲ್ಲ ಒಂದಾಗಿ ತೋರಿತು. 'ಈಗ ಕಳ್ಳತನದ ಅಭ್ಯಾಸ ಕಲಿತೆಯಾ? ಹೇಳು, ನೀನು ರೂಪಾಯಿ ಕದ್ದೆಯೋ ಇಲ್ಲವೋ'—ಎಂದು ಹತ್ತಿರ ಬಂದರು. ನನ್ನ ಶ್ವಾಸವೇ ನಿಂತಂತಾಯಿತು. ಸೆಳೆದು ಹಿಡಿದ ಹರಿತ ಖಡ್ಗವೇ ನನ್ನ ಮುಂದೆ ತೂಗಾಡುತ್ತಿದ್ದಂತೆ ತೋರಿತು. ಶಬ್ದ ಸಹ ಬಾಯಿಂದ ಹೊರಬರಲು ಹೆದರುತ್ತಿತ್ತು. ಆಗ ಇನ್ನಷ್ಟು ಜೋರಾಗಿ ಗದರಿಸುತ್ತ 'ಏಕೆ ಮಾತಾಡುವುದಿಲ್ಲ? ಏಕೆ ರೂಪಾಯಿ ಕದ್ದೆ?'—ಎಂದು ಮತ್ತೂ ಹತ್ತಿರ ಬಂದರು. ನಾನು ಸಹ ಜೀವ ಕೈಯಲ್ಲಿ ಹಿಡಿದುಕೊಂಡವನಂತೆ 'ನಾನು ಎಲ್ಲಿ.....' ಬಾಯಿಂದ ಮಾತು ಪೂರಾ ಹೊರಬಂದಿದ್ದಿಲ್ಲ. ಅಷ್ಟರಲ್ಲೇ ಅಪ್ಪ ಕರಾಳರೂಪ ತಾಳಿ, ಹಲ್ಲು ಕಡಿಯುತ್ತ, ಕೈಯನ್ನೆತ್ತಿಕೊಂಡು ನನ್ನತ್ತ ಹಾರಿ ಬಂದರು. ನಾನೂ ಹಿಂದೆ ಸರಿಯುತ್ತಾ, ಜೋರಾಗಿ ಒಂದೇ

Sri Vidyabharathi Book Centre, Sringeri

CC-0. In Public Domain. Digitized by eGangotri

ಸಮನೆ ಬೊಬ್ಬಿಟ್ಟೆ. ನನ್ನ ಅವತಾರ ನೋಡಿ ಅಪ್ಪ ಸಹ ಬೆಚ್ಚಿ ಬಿದ್ದಿರಬೇಕು. ಅವರ ಎತ್ತಿದ ಕೈ ಹಾಗೆಯೇ ಉಳಿಯಿತು. ಈಗಲೇ ಈ ಅವಸ್ಥೆಯಾದರೆ ಏಟು ಬಿದ್ದೊಡನೆ ಇವನ ಪ್ರಾಣವೇ ಹಾರಿಹೋಗಬಹುದೆಂದು ತಿಳಿದರೋ ಏನೋ! ನನ್ನ ಉಪಾಯ ಸಫಲವಾಗುವ ಸಂಭವ ನೋಡಿ ನಾನೂ ಕುತ್ತಿಗೆ ಒಡೆದು ಅಳಲಾರಂಭಿಸಿದೆ. ಅಷ್ಟರಲ್ಲಿ ಅದೃಷ್ಟ ವಶಾತ್ ಅಲ್ಲಿ ಸೇರಿದ್ದವರು ಅಪ್ಪನನ್ನು ತಡೆದು, ನನಗೆ ಒಳಗೋಡಲಿಕ್ಕೆ ಕಣ್ಣುಸನ್ನೆ ಮಾಡಿದರು. ಇಂತಹ ಸಂದರ್ಭದಲ್ಲಿ ಬೇರೆ ಮಕ್ಕಳಾದರೆ ಸುಮ್ಮನೆ ಸಿಕ್ಕಿಬಿದ್ದು ಏಟು ತಿನ್ನುತ್ತಿದ್ದರು. ಆದರೆ ನಾನು ಬುದ್ಧಿವಂತಿಕೆಯಿಂದ ಜಾರಿಬಿಟ್ಟೆ.

ಆದರೆ ಒಳಗಿನ ದೃಶ್ಯ ಇದಕ್ಕಿಂತಲೂ ಭಯಂಕರವಾಗಿತ್ತು. ನೋಡಿ ನನ್ನ ರಕ್ತವೇ ಆರಿಹೋಯಿತು. ಶ್ಯಾಮಣ್ಣನ ಎರಡೂ ಕೈಗಳನ್ನು ಒಂದು ಕಂಬಕ್ಕೆ ಕಟ್ಟಿ ಹಾಕಿದ್ದರು. ಇಡೀ ದೇಹವೇ ಧೂಳಿನಿಂದ ಧೂಸರವಾಗಿ ಹೋಗಿತ್ತು. ಅವನು ಇನ್ನೂ ಬಿಕ್ಕಿಬಿಕ್ಕಿ ಅಳುತ್ತಲೇ ಇದ್ದನು. ಪ್ರಾಯಶಃ ಅವನನ್ನು ಅಂಗಳವಿಡೀ ಹೊರಳಿಸಿದ್ದರು. ಇಡೀ ಅಂಗಳವೇ ಅವನ ಕಣ್ಣೀರಿಂದ ಒದ್ದೆಯಾಗಿದ್ದಂತೆ ತೋರುತ್ತಿತ್ತು. ಚಿಕ್ಕಮ್ಮ ಶ್ಯಾಮಣ್ಣನನ್ನು ಗದರಿಸುತ್ತಿದ್ದರು. ಅಮ್ಮ ಕೂತುಕೊಂಡು ಮುಸಾಲೆ ಕಡೆಯುತ್ತಿದ್ದರು. ನನ್ನ ಮೇಲೆ ಚಿಕ್ಕಮ್ಮನ ದೃಷ್ಟಿಯೇ ಮೊದಲು ಬಿತ್ತು. 'ಅಗೋ— ಅವನು ಕೂಡಾ ಬಂದ! ಏನೋ? ರೂಪಾಯಿ ನೀನು ಕದ್ದುದೋ ಅಥವಾ ಇವನೋ?' ಎಂದು ಕೇಳಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾನು ನಿಶ್ಶಂಕನಾಗಿ ಹೇಳಿದೆ: 'ಶ್ಯಾಮಣ್ಣ.'

ಆಗ ಅಮ್ಮ 'ಒಂದು ವೇಳೆ ಅವನೇ ಕದ್ದುದಾದರೂ ಒಳಬಂದು ಯಾರ ಹತ್ತಿರವಾದರೂ ನೀನೇಕೆ ಹೇಳಲಿಲ್ಲ ?' ಎಂದು ಕಣ್ಣು ಕೆರಳಿಸಿ ಕೇಳಿದರು.

ಈಗ ಸುಳ್ಳು ಹೇಳದೆ ಬನುಕುವುದೇ ಕಷ್ಟವಾಗಿತ್ತು. ಮನುಷ್ಯನ ಪ್ರಾಣವೇ ಹೋಗುವ ಸಂದರ್ಭದಲ್ಲಿ ಸುಳ್ಳು ಹೇಳಿದರೂ ಅದು ತಪ್ಪಲ್ಲವೆಂದು ನನ್ನ ಅಭಿಪ್ರಾಯ. ಶ್ಯಾಮಣ್ಣನಿಗಂತೂ ಏಟು ತಿಂದು ಅಭ್ಯಾಸವಾಗಿಹೋಗಿದೆ. ಎರಡು ಮೂರು ಛಡಿ ಪುನಃ ಬಿದ್ದರೂ ಹಾಳಾಗಿ ಹೋಗ ಲಾರ. ನಾನೆಂದೂ ಹೆಚ್ಚಿಗೆ ಏಟು ತಿಂದವನಲ್ಲ. ನನ್ನ ಮಟ್ಟಿಗೆ ಎರಡು ಮೂರು ಏಟಿನಲ್ಲಿಯೇ ನನ್ನ ಅವತಾರ ಸಮಾಪ್ತಿ ಯಾಗುವಂತಿತ್ತು. ಅದೂ ಅಲ್ಲದೆ ಶ್ಯಾಮಣ್ಣ ಸಹ ತನ್ನನ್ನು ಉಳಿಸಿಕೊಳ್ಳುವುದಕ್ಕಾಗಿ ನನ್ನನ್ನು ಸಿಕ್ಕಿಸಿಹಾಕುವ ಪ್ರಯತ್ನ ಮಾಡಿದ್ದನು. ಇಲ್ಲವಾದರೆ ಚಿಕ್ಕಮ್ಮ ನನ್ನ ಹತ್ತಿರ— ರೂಪಾಯಿ ಕದ್ದುದು ನೀನೋ ಶ್ಯಾಮಣ್ಣನೋ— ಎಂದು ಏಕೆ ಕೇಳುತ್ತಿದ್ದರು ? ಹಾಗಾಗಿ ನಾನು ಸುಳ್ಳು ಹೇಳುವುದು ಸರಿಯಲ್ಲವಾದರೂ ಕ್ಷಮಾರ್ಹವಾಗಿತ್ತು.

ಆದ್ದರಿಂದ ನಾನು 'ಯಾರ ಹತ್ತಿರವಾದರೂ ಹೇಳಿದ್ದೇ ಆದರೆ ಕೊಂದುಹಾಕುವೆನೆಂದು ಶ್ಯಾಮಣ್ಣ ಗದರಿಸಿದ್ದ' ಎಂದು ಕಣ್ಣಲ್ಲಿ ನೀರು ತುಂಬಿ ಹೇಳಿದೆ. ಆಗ ನಮ್ಮಮ್ಮ 'ನೋಡಿದಿರಾ, ಅದೇ ಮಾತು ಬಂತೋ ಇಲ್ಲವೋ? ನನ್ನ ಮಗುವಿಗೆ ಅಂಥ ದುರ್ಬುದ್ಧಿಯಿಲ್ಲವೆಂದು ನಾನು ಹೇಳು

Sri Jayabharati, Book Centre, Shimoga

CC-O. In Public Domain. Digitized by eGangotri

ತ್ತಲೇ ಇದ್ದೆ. ಅವನು ಹಣವನ್ನು ಮೂಸಿ ಸಹ ನೋಡುತ್ತಿರಲಿಲ್ಲ. ಆದರೆ ಎಲ್ಲರೂ ಸೇರಿ ನನ್ನನ್ನೇ ಹೆಡ್ಡಿಯನ್ನಾಗಿ ಮಾಡನೋಡಿದಿರಿ' ಎಂದು ಕಣ್ಣರಳಿಸಿ ಹೇಳಿದರು.

ಆಗ ಶ್ಯಾಮಣ್ಣ 'ಹೇಳಿದರೆ ಕೊಂದುಹಾಕುವೆನೆಂದು ನಾನು ಯಾವಾಗಲೋ ಹೇಳಿದ್ದು?' ಎಂದು ಜೋರಾಗಿ ಗದರಿಸಿ ಕೇಳಿದ.

ನಾನೂ ನಿರ್ಭಯವಾಗಿ 'ಆಗಲೇ; ಕೆರೆಯ ದಡದಲ್ಲಿಯೇ' ಎಂದು ಉತ್ತರವಿತ್ತೆ. ಆಗ ಶ್ಯಾಮಣ್ಣ 'ಅಮ್ಮಾ, ಇದು ಸುಳ್ಳು; ತೀರಾ ಸುಳ್ಳು' ಎಂದು ಸಾರಿ ಸಾರಿ ಹೇಳಲಾರಂಭಿಸಿದ.

ಆಗ ಚಿಕ್ಕಮ್ಮ 'ಸುಳ್ಳಲ್ಲ; ಅದು ಸತ್ಯವಾಗಿದೆ. ನೀನೇ ಸುಳ್ಳುಗಾರ! ಉಳಿದವರೆಲ್ಲರೂ ಸತ್ಯವಂತರು! ನಿನ್ನ ಹೆಸರು ಈಗ ಹೊರಬಂತೋ ಇಲ್ಲವೋ? ನಿನ್ನ ಅಪ್ಪನೂ ಪೇಟೆಯಲ್ಲಿ ನೌಕರಿ ನೋಡುತ್ತಿದ್ದರೆ, ಹೊರಗಿಂದ ರೂಪಾಯಿ ಸಂಪಾದಿಸಿ ತರುತ್ತಿದ್ದರೆ—ನಾಲ್ಕು ಜನ ಅವರನ್ನೂ ಒಳ್ಳೆಯ ಮನುಷ್ಯ ಎಂದು ಹೇಳುತ್ತಿದ್ದರು. ನೀನೂ ಸತ್ಯವಂತನಾಗುತ್ತಿದ್ದೆ. ಈಗ ನೀನೇ ಸುಳ್ಳುಗಾರ. ಯಾರ ಹಣೆಯಲ್ಲಿ ಮಿಠಾಯಿ ತಿನ್ನುವುದು ಬರೆದಿತ್ತೋ ಆತ ಮಿಠಾಯಿ ತಿಂದ. ನಿನ್ನ ಹಣೆಯಲ್ಲಿ ಏಟು ತಿನ್ನುವುದೇ ಬರೆದಿತ್ತು.' —ಹೀಗೆ ಹೇಳುತ್ತಾ ಶ್ಯಾಮಣ್ಣನ ಕೈ ಬಿಡಿಸಿ ಕರೆದುಕೊಂಡು ಒಳಹೋದರು.

ನನ್ನ ವಿಚಾರದಲ್ಲಿ ಅಮ್ಮ ನನ್ನೆಡೆಗಿನ ದೃಷ್ಟಿಯಿಂದ

CC-O. Vidyabharathi Book Centre, Sirsi

CC-O. In Public Domain. Digitized by eGangotri

ನೋಡಿ ಮಾತನ್ನೇ ಬದಲಿಸಿಬಿಟ್ಟರು. ಹಾಗಾಗಿ ನನಗೆ ಏಟು ಬೀಳುವ ಸಂದರ್ಭ ಕಡಿಮೆಯಾಯಿತು. ಅಮ್ಮನ ಹತ್ತಿರ ಕೂತು ನನ್ನ ನಿರ್ದೋಷತೆಯ ರಾಗಾಲಾಪನೆಯನ್ನು ಬಹು ಚೆನ್ನಾಗಿ ನಡೆಸಿದೆ. ಸರಳಹೃದಯದ ಅಮ್ಮನೂ ನನ್ನನ್ನು ಸತ್ಯಹರಿಶ್ಚಂದ್ರನೆಂದೇ ತಿಳಿದರು. ಎಲ್ಲ ಅಪರಾಧವೂ ಶ್ಯಾಮಣ್ಣನದೇ ಎಂದು ಅವರಿಗೆ ಪೂರ್ಣ ವಿಶ್ವಾಸವಾಗಿ ಹೋಯಿತು.

* * *

ಸ್ವಲ್ಪ ಸಮಯವಾದ ನಂತರ ನಾನು ಅವಲಕ್ಕಿ ಮತ್ತು ಬೆಲ್ಲ ಹಿಡಿದುಕೊಂಡು ಕೊಠಡಿಯಿಂದ ಹೊರಹೊರಟೆ. ಶ್ಯಾಮಣ್ಣನೂ ಆಗ ಏನನ್ನೋ ಬಾಯಲ್ಲಿ ಹಾಕಿಕೊಂಡು ಹೊರಬಂದನು. ನಾವಿಬ್ಬರೂ ಒಟ್ಟಾಗಿ ಹೊರತೋಟಕ್ಕೆ ಹೊರಟೆವು. ಹಾಗೆಯೇ ನಮ್ಮ ನಮ್ಮ ಕರುಣಕಥೆ ಹೇಳಿಕೊಳ್ಳಲಾರಂಭಿಸಿದೆವು. ನನ್ನ ಕಥೆಯು ಸುಖಾಂತ ವಾಗಿತ್ತು; ಶ್ಯಾಮಣ್ಣನದು ದುಃಖಾಂತ. ಆದರೆ ಪರಿಸಮಾಪ್ತಿ ಮಾತ್ರ ಒಂದೇ ಆಗಿತ್ತು : ಅವಲಕ್ಕಿ ಮತ್ತು ಬೆಲ್ಲ.

———

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಮಕ್ಕಳ ಸಾಹಿತ್ಯ

ಹೊಸ ರೂಪದ 'ಹಿತೋಪದೇಶ'—ಕೆ. ಎಸ್. ರಂಗಪ್ಪ

1. ಕಥೆಗಳ ಕಥೆ ಮತ್ತು ಕುಚೇಷ್ಟೆಯ ಕೋತಿ 3 00
2. ಕಳ್ಳನಿಗೆ ಪೂಜೆ 3 00
3. ದಿಟ್ಟ ಮೊಲ 3 00
4. ಕೊಲೆಗಾರನ ಕೊಲೆ (ಮಕ್ಕಳ ನಾಟಕ) 3 00
5. ಹೀನ ಸೇವಕ 3 00
6. ರಾವಣ ಸನ್ಯಾಸಿ (ಮಕ್ಕಳ ನಾಟಕ) 3 00

'ನೀತಿಕಥಾಭಂಡಾರ' (ಸಚಿತ್ರ)—ಎ. ಎನ್. ಭಟ್

1. ಹೊಲದಲ್ಲಿ ಬಿತ್ತಿದ ಹಣ ಮತ್ತು ಇತರ ಕಥೆಗಳು 3 00
2. ಸಾರಿವಾಳದ ಪಂಚಶೀಲ ಮತ್ತು ಇತರ ಕಥೆಗಳು 3 00
3. ಬಲವೋ, ಬುದ್ಧಿಯೋ? ಮತ್ತು ಇತರ ಕಥೆಗಳು 3 00
4. ಕೋಳಿ-ನಾಯಿ ಜಗಳ ಮತ್ತು ಇತರ ಕಥೆಗಳು 3 00
5. ಹದ್ದು-ಕರಡಿಯ ನ್ಯಾಯಸಂಧಾನ ಮತ್ತು ಇತರ ಕಥೆಗಳು 3 00

ಪುಟ್ಟಣ್ಣ ಹೇಳಿದ ಕಥೆಗಳು (ಸಚಿತ್ರ)—ಎಂ. ಎಸ್. ಪುಟ್ಟಣ್ಣ

1. ಹಕ್ಕಿಯ ಬುದ್ಧಿ ಮತ್ತು ಇತರ ಐದು ಕಥೆಗಳು 3 00
2. ಹಸು ಮತ್ತು ಹೆಗ್ಗಣ ಮತ್ತು ಇತರ ಏಳು ಕಥೆಗಳು 3 00
3. ನ್ಯಾಯಾಧಿಪತಿಯ ಯುಕ್ತಿ ಮತ್ತು ಇತರ ಏಳು ಕಥೆಗಳು 3 00

ಶಾಲೆಯ ಕಥೆಗಳು—ಕೆ. ರಾಮಕೃಷ್ಣ ಉಡುಪ

1. ಆ ಒಂದು ರೂಪಾಯಿ! 3 00
2. ಸತ್ಯದ ಸಾಮರ್ಥ್ಯ 3 00
3. ನಮ್ಮಣ್ಣಿ 3 00

ಮಕ್ಕಳ ಕವನಗಳು—ಚಂದ್ರಶೇಖರಯ್ಯ

1. ಹುಂಟರ ಕ್ರಿಕೆಟ್ ಮತ್ತು ಇತರ ಮಕ್ಕಳ ಕವನಗಳು 4 00

ಭಾರತ ಸರಕಾರದಿಂದ ಬಹುಮಾನಿತ ಪುಸ್ತಕಗಳು (ಸಚಿತ್ರ)

1. ಬ್ರಹ್ಮಾಂಡ ನೋಡು, ವಿಜ್ಞಾನ ಕಲಿ—ಸಿ. ಕೆ. ವೆಂಕಟನರಸಿಂಹಯ್ಯ 6 00
2. ನಮ್ಮ ಮನಸ್ಸು—ಕೆ. ರಾಮಕೃಷ್ಣ ಉಡುಪ 3 75
3. ಕಾಷ್ಠ-ನೃಸನ—ಟಿ. ಎನ್. ಮಹಾಲಕ್ಷ್ಮಿ 3 75

ಗೀತಾ ಬುಕ್ ಹೌಸ್ : ಕೆ. ಆರ್. ಸರ್ಕಲ್ : ಮೈಸೂರು

ಬೆಲೆ: ರೂ. 3

Sri Vidyabharathi Book Centre, Sringeri